ಸೆಲೆಬ್ರಿಟಿ

■ ಹನಿ

## ರೆಗ್ ಸ್ಕಾಟ್ ಎಂಬ ಬೈಕರ್




ಈ ಅಜ್ಜನಿಗೆ ಈಗ 94 ನಡೆಯುತ್ತಿದೆ. ನೂರು ತುಂಬಲು ಆರು ವರ್ಷ ಕಡಿಮೆ. ಈಗಲೂ 250 ಸಿ.ಸಿಯ ತನ್ನ ಹೋಂಡಾ ಬೈಕ್ ಹತ್ತಿ ಊರು ಸುತ್ತುತ್ತಾನೆ. ಊರ ಹೊರವಲಯಕ್ಕೆ ಹೊರಟನೆಂದರೆ ಸ್ಪೀಡ್ 100 ಕಿ.ಮೀ ದಾಟುತ್ತದೆ! ಅದು ಆತನಿಗೆ ಮಾಮೂಲು. ಯಾಕೆಂದರೆ ಕಳೆದ 74 ವರ್ಷಗಳಿಂದ ಆತ ಪ್ರತಿದಿನವೂ ಬೈಕ್ ಓಡಿಸುತ್ತಲೇ ಇದ್ದಾನೆ. ಈತ ಮನೆಯಲ್ಲಿ ಇದ್ದುದಕ್ಕಿಂತ ಹೆಚ್ಚು ಹೊತ್ತು ಬೈಕ್ ಮೇಲೇ ಇದ್ದವನು!

ಈತನ ಹೆಸರು ರೆಗ್ ಸ್ಕಾಟ್. 74 ವರ್ಷಗಳ ಅವಧಿಯಲ್ಲಿ ಈತ ಸುಮಾರು 6,19,275 ಕಿ.ಮೀಗಳಷ್ಟು ದೂರ ಬೈಕ್ ಓಡಿಸಿದ್ದಾನೆ. ಅಂದರೆ 15ಕ್ಕೂ ಹೆಚ್ಚು ಸಲ ಬೈಕ್ ಮೇಲೆ ವಿಶ್ವಪರ್ಯಟನೆ ಮಾಡಿದಷ್ಟು ದೂರ! ಜಗತ್ತಿನ ಬಹುತೇಕ ದೇಶಗಳಿಗೆ ಈತ ಭೇಟಿ ನೀಡಿದ್ದಾನೆ. ಬ್ರಿಟನ್ನಿನ ಅತ್ಯಂತ ಹಿರಿಯ ಈ ಬೈಕ್ ರೇಸರ್, ನಾರ್‌ಫಾಲ್ಕ್‌ನ ಉದಾಮ್ ನಗರವಾಸಿ.

ರೆಗ್ ಸ್ಕಾಟ್ ಮೊದಲ ಬೈಕ್ ಖರೀದಿಸಿದ್ದು 1937ರಲ್ಲಿ. ಆಗ ಬರೇ 73 ಪೌಂಡ್‌ಗಳನ್ನು ನೀಡಿ ಹೊಸ ನಾರ್ಟನ್ 16 ಎಚ್ 490 ಸಿಸಿ ಬೈಕ್ ಖರೀದಿಸಿದ ಬಳಿಕ ಆತನ ಊರೂರುಗಳ ಸುತ್ತಾಟ ಶುರುವಾಯಿತು. ಆ ಬಳಿಕ ಆತ ಒಟ್ಟು ಏಳು ಬೈಕ್‌ಗಳನ್ನು ಖರೀದಿಸಿದ್ದಾನೆ. ಅತ್ಯಂತ ಶಕ್ತಿಶಾಲಿ ಬಿಎಂಡಬ್ಲ್ಯು ಬಾಕ್ಸರ್ 1000 ಸಿಸಿ ಬೈಕ್ ಕೂಡಾ ಆತನ ಬಳಿ ಇದೆ. 'ಈಗ ಈ ವಯಸ್ಸಿನಲ್ಲಿ ಅದನ್ನು ಓಡಿಸುವುದು ಕಷ್ಟವಾಗುತ್ತಿದೆ. ಸದ್ಯಕ್ಕೆ 250 ಸಿಸಿ ಬೈಕ್ ಸಾಕು' ಎಂದು ನಗುತ್ತಾನೆ ಈ ಅಜ್ಜ. ಈಗಲೂ ವಾರಕ್ಕೆ 3–4 ದಿನ ಊರ ಸುತ್ತಮುತ್ತ ಬೈಕ್ ಓಡಿಸುವುದು, ಇತರ ಬೈಕರ್‌ಗಳನ್ನು ಭೇಟಿಯಾಗಿ ಬೈಕ್‌ಗಳ ಹೊಸ ತಂತ್ರಜ್ಞಾನದ ಕುರಿತು ಹರಟೆ ಹೊಡೆಯುವುದು ಈತನ ಕಾಯಕ.

'ವಯಸ್ಸಾಗಿದೆ ಎಂದು ನೀವು ಹೇಳಿದರೆ ನನಗೆ ಏನೂ ಅನ್ನಿಸುವುದಿಲ್ಲ. ಬೈಕ್ ಮೇಲಿನ ಸ್ವಾತಂತ್ರ್ಯವನ್ನು ನಾನು ಸದಾ ಇಷ್ಟ ಪಡುತ್ತೇನೆ. ನನ್ನ ಗೋರಿಯೊಳಗೂ ನಾನು ಬೈಕ್ ಮೇಲೆಯೇ ಪಯಣಿಸುತ್ತೇನೆ' ಎಂದು ನಗುತ್ತಾನೆ ಈ ಅಜ್ಜ.

ವೃತ್ತಿಯಲ್ಲಿ ಪವರ್ ಸ್ಟೇಶನ್ ಎಂಜಿನಿಯರ್ ಆಗಿದ್ದ ನಿವೃತ್ತನಾಗಿರುವ ರೆಗ್ ಸ್ಕಾಟ್‌ಗೆ ಮೂವರು ಮಕ್ಕಳು. ಏಳು ಮೊಮ್ಮಕ್ಕಳು ಹಾಗೂ ಏಳು ಮರಿಮಕ್ಕಳು. ಈತ ಶೀಘ್ರವೇ ಇನ್ನೊಂದು ಹೊಸ ಬೈಕ್ ಖರೀದಿಸಲು ಆಲೋಚಿಸುತ್ತಿದ್ದಾನೆ!

## ಅಶ್ವಿನಿಯ ಸಂಕಟ




ವೈಟ್‌ಲಿಫ್ಟರ್ ಕುಂಜರಾಣಿ ದೇವಿ, ಡಿಸ್ಕಸ್ ಎಸೆತಗಾರ ಅನಿಲ್ ಕುಮಾರ್, ಅಥ್ಲೀಟ್ ಸುನಿತಾ ರಾಣಿ, ವೈಟ್ ಲಿಫ್ಟರ್ ಸತೀಶ್ ರೈ– ಎಲ್ಲರೂ ಆದ ಮೇಲೆ ಈಗ ಅಶ್ವಿನಿ ಅಕ್ಕುಂಜಿಯ ಸರದಿ. ವರ್ಷದ ಹಿಂದೆಯಷ್ಟೇ ಏಷ್ಯನ್ ಗೇಮ್ಸ್‌ನಲ್ಲಿ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ರಿಲೇ ಓಟದಲ್ಲಿ ಚಿನ್ನದ ಪದಕ ಗೆದ್ದು ಬೀಗಿದ್ದ ಅಶ್ವಿನಿ ಈಗ ಉದ್ದೀಪನಾ ಮದ್ದು ಸೇವನೆಯ ಆರೋಪ ಹೊತ್ತು ಅವನತ ಮುಖಿಯಾಗಿ ನಿಂತಿದ್ದಾಳೆ. ಆಗ ಈಕೆಯನ್ನು ಕರ್ನಾಟಕದ ಮತ್ತು ಭಾರತದ ಹೆಮ್ಮೆ ಎಂದು ಎತ್ತಿ ಕೊಂಡಾಡಿದ ಜನರೇ ಈಗ 'ಛೀ' ಎಂದು ಮೂಗು ಮುರಿಯುತ್ತಿದ್ದಾರೆ.

ಅಂತರರಾಷ್ಟ್ರೀಯ ಸಂಸ್ಥೆ ನಾಡಾ ನಡೆಸಿದ ಉದ್ದೀಪನಾ ಮದ್ದು ಸೇವನೆಯಲ್ಲಿ ಅಶ್ವಿನಿಯ ಟೆಸ್ಟ್ ಫಲಿತಾಂಶ ಪಾಸಿಟಿವ್ ಎಂದು ದಾಖಲಾಗಿದೆ. ಈ ವಾರ ಇನ್ನೊಮ್ಮೆ ಬಿ ರಿಪೋರ್ಟ್ ನೀಡಬೇಕಿದೆ. ಅದರಲ್ಲೂ ಪಾಸಿಟಿವ್ ಎಂದಾದರೆ ಅಶ್ವಿನಿಯ ವನವಾಸ ಘೋರವಾಗಲಿದೆ.

'ನನಗೇನೂ ಗೊತ್ತಿಲ್ಲ. ನನ್ನ ಜೀವನದಲ್ಲಿ ಯಾವತ್ತೂ ನಾನು ಸ್ಟಿರಾಯ್ಡ್ ಸೇವಿಸಿಲ್ಲ. ಏಷ್ಯನ್ ಗೇಮ್ಸ್ ವೇಳೆ ಮೂರು ಸಲ ಟೆಸ್ಟ್ ಮಾಡಿದರು. ಆಗ ನೆಗೆಟಿವ್ ಬಂದಿದೆ. ಈಗ ಪಾಸಿಟಿವ್ ಹೇಗಾಯಿತೆನ್ನುವುದು ಗೊತ್ತಾಗುತ್ತಿಲ್ಲ. ಕೋಚ್ ನೀಡಿದ ಮಾತ್ರೆ ಬಿಟ್ಟರೆ ನಾನು ಬೇರೇನೂ ತಿಂದಿಲ್ಲ' ಎನ್ನುವುದು ಅಶ್ವಿನಿ ಹೇಳಿಕೆ. ವರ್ಷದ ಹಿಂದೆ ಅನಾಮಿಕಳಾಗಿದ್ದ ಹುಡುಗಿಯೊಬ್ಬಳು ಎರಡು ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದು ದಿನ ಬೆಳಗಾಗುವುದರೊಳಗೆ ತಾರೆಯಾದದ್ದು ರೋಚಕ ಕಥೆಯೇ. ಕನ್ನಡ ಕರಾವಳಿಯ ಈ ಚಿನ್ನದ ಹುಡುಗಿ ಮೊನ್ನೆಯವರೆಗೆ ಕನ್ನಡಿಗರ ಹೆಮ್ಮೆಯಾಗಿ ಗುರುತಿಸಿಕೊಂಡಿದ್ದಳು. ಆದರೀಗ ಅನುಮಾನದ ಹುತ್ತ ಅಶ್ವಿನಿಯ ಸುತ್ತ ಕುಣಿಕೆ ಬಿಗಿದಿದೆ. ಅಶ್ವಿನಿ ಹೇಳುವುದು ಸತ್ಯವೇ ಇರಬಹುದು. ವಿದೇಶೀ ಕೋಚ್ ಚಿನ್ನ ಗೆಲ್ಲಿಸುವ ದುರಾಸೆಯಿಂದ ಅಶ್ವಿನಿ ಸಹಿತ ಇತರ ಮೂವರು ಅಥ್ಲೀಟ್‌ಗಳಿಗೂ ಸ್ಟಿರಾಯ್ಡ್ ಅಂಶವಿರುವ ಮಾತ್ರೆ ನೀಡಿರಬಹುದು. ಸತ್ಯ ಏನೇ ಇದ್ದರೂ ಪರಿಣಾಮ ಒಂದೇ. ಅಂತರರಾಷ್ಟ್ರೀಯ ಕ್ರೀಡೆಯಿಂದ ಅವಮಾನಿತಳಾಗಿ ಹೊರದಬ್ಬಲ್ಪಡುವುದು ಕಡಿಮೆ ಶಿಕ್ಷೆಯೇನಲ್ಲ. ಅಶ್ವಿನಿ ಹೇಳುತ್ತಿರುವುದು ಸತ್ಯವೇ ಆಗಿದ್ದಲ್ಲಿ, ಇದೊಂದು ದುರಂತವೇ ಸರಿ. ಹಳ್ಳಿಗಾಡಿನಿಂದ ಶ್ರಮಪಟ್ಟು ಮೇಲೆ ಬಂದು ಸ್ವಂತ ಬಲದಿಂದ ಅತ್ಯುತ್ತಮ ಓಟಗಾರ್ತಿಯಾದ ಹುಡುಗಿಯೊಬ್ಬಳು ಹೀಗೆ ತನ್ನದಲ್ಲದ ತಪ್ಪಿಗಾಗಿ ಶಿಕ್ಷೆ ಅನುಭವಿಸಬೇಕಾಗಿರುವುದು ವಿಚಿತ್ರವೇ. ಅದರಲ್ಲೂ ಒಲಿಂಪಿಕ್ಸ್ ಸಿದ್ಧತೆ ಆರಂಭವಾಗಿರುವ ಸಂದರ್ಭದಲ್ಲಿ ಈ ವಿಷಘಟನೆ ನಡೆದಿರುವುದು ನಿಜಕ್ಕೂ ವಿಪರ್ಯಾಸ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65